ಪರಿಸರ ಕಾಳಜಿಯ ಸಮಾನಸಕ್ತರ ಬಳಗ 'ಹಸಿರುಭೂಮಿ ಪ್ರತಿಷ್ಠಾನ' ಕಳೆದ ಮೂರು ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ನಡೆಸಿರುವ ಜಲಾಂದೋಲನ ಇಡೀ ನಾಡಿಗೆ ಮಾದರಿಯಾದುದು. ಜನಶಕ್ತಿ ಮತ್ತು ಸರ್ಕಾರಿ ಶಕ್ತಿಯ ಸಂಘಟಿತ ಪ್ರಯತ್ನದ ಫಲವಾಗಿ ಜಿಲ್ಲೆಯಲ್ಲಿನ ಹಲವಾರು ಕೆರೆ–ಕಲ್ಯಾಣಿ–ಕೊಳವೆಬಾವಿಗಳು ನೀರು ತುಂಬಿಕೊಂಡು ನಳನಳಿಸುತ್ತಿವೆ. ಈ ಆಂದೋಲನದಲ್ಲಿ ಭಾಗಿಯಾದ ಕವಯಿತ್ರಿ **ರೂಪ ಹಾಸನ** ಅವರ ಈ 'ಸ್ವಾನುಭವ ಕಥನ', ಉಳಿದ ಜಿಲ್ಲೆಗಳಲ್ಲೂ ಜಲಾಂದೋಲನ ಆರಂಭಿಸಲಿಕ್ಕೆ ಪ್ರೇರಣೆ ನೀಡುವಂತಿದೆ.

# ಹಳ್ಳಿ ಹಳ್ಳಿಗೂ ಜಲದೀವಿಗೆ


ಸೋಮನಹಳ್ಳಿ ಕಲ್ಯಾಣಿ ಪುನಶ್ಚೇತನದ ಮೊದಲ ಪ್ರಯತ್ನ ಆರಂಭವಾಗಿದ್ದು ಹೀಗೆ

'ಬರ' ಹಾಸನ ಜಿಲ್ಲೆಯ ಮೇಲೆ ಯುದ್ಧ ಸಾರಿ ಹಲವು ವರ್ಷಗಳೇ ಕಳೆದಿದೆ. ಪಶ್ಚಿಮಘಟ್ಟದ ಸಮೃದ್ಧ ಕಾಡಿನ ಸೆರಗಿನ ಭಾಗದಲ್ಲಿರುವ, ಅರೆ ಮಲೆನಾಡು ಪ್ರದೇಶವಾದ, 'ಬಡವರ ಊಟಿ' ಎಂದೇ ಹೆಸರಾಗಿದ್ದ, ಸಮೃದ್ಧ ಮಳೆ ಬೀಳುತ್ತಿದ್ದ ಜಿಲ್ಲೆ ನಮ್ಮದು. ಕಾಡು ನಿಧಾನಕ್ಕೆ ಒತ್ತುವರಿಯಾಗಿ ಕಣ್ಮರೆಯಾಗುತ್ತಾ, ಕೆರೆ ಕಟ್ಟೆಗಳು ಹೂಳು–ಕೊಳಚೆ ತುಂಬಿ ಗೊಬ್ಬರದ ಗುಂಡಿಯಾಗುತ್ತಾ, ಅಕ್ಕಪಕ್ಕದವರ ಆಕ್ರಮಣಕ್ಕೆ ತುತ್ತಾಗಿ ಕಾಣೆಯಾಗುತ್ತಾ ಬಂದಂತೆ, ಹವಾಮಾನ ವೈಪರೀತ್ಯವೂ ಜೊತೆಗೂಡಿ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಬಂದಿದೆ. ಇದರಿಂದಾಗಿ ಕಳೆದ ಏಳೆಂಟು ವರ್ಷಗಳಿಂದ ಹಾಸನ ಜಿಲ್ಲೆಯ ನೀರಿನ ಚಿತ್ರಣವೇ ಬದಲಾಗಿದೆ.

ಜಿಲ್ಲೆಯ ಅನೇಕ ಭಾಗಗಳಲ್ಲಿ ಕುಡಿಯುವ ನೀರಿಗೂ ತತ್ವಾರವಾಗಿ, ಟ್ಯಾಂಕರ್‌ಗಳಿಂದ ನೀರು ಪೂರೈಸಲಾಗುತ್ತಿದೆ. ಬಹಳಷ್ಟು ಹಳ್ಳಿಗಳು ಶಾಶ್ವತ ನೀರಿನ ಸಂಕಷ್ಟಕ್ಕೀಡಾಗಿವೆ. ಸಾವಿರ ಅಡಿ ಕೊಳವೆಬಾವಿ ಕೊರೆದರೂ ನೀರಿನ ಸೆಲೆಯಿಲ್ಲ! ಅರ್ಧಕ್ಕಿಂತಲೂ ಹೆಚ್ಚು ಕೊಳವೆ ಬಾವಿಗಳು ಬತ್ತಿಹೋಗಿವೆ. ಕುಡಿವ ನೀರಿನ ಸೆಲೆ ಪಾತಾಳ ಸೇರಿ, ನೀರು ವಿಷಯುಕ್ತವಾಗಿ ಕುಡಿಯುವ ಅರ್ಹತೆಯನ್ನು ಕಳೆದುಕೊಳ್ಳುತ್ತಿದೆ. ಜಾನುವಾರುಗಳಿಗೆ ಮೇವನ್ನೂ ಒದಗಿಸಲಾಗದೇ ಇತ್ತೀಚಿನ ವರ್ಷಗಳಲ್ಲಿ ಲಕ್ಷಾಂತರ ರೂಪಾಯಿ ವಿನಿಯೋಗಿಸಿ ಮೇವನ್ನೂ ಇತರ ಜಿಲ್ಲೆ/ ರಾಜ್ಯಗಳಿಂದ ಆಮದು ಮಾಡಿಕೊಳ್ಳುವ ಸ್ಥಿತಿ. 2017ರ ಕೇಂದ್ರ ಬರ ಅಧ್ಯಯನ ಸಮಿತಿಯು ಹಾಸನ ಜಿಲ್ಲೆಯನ್ನು ರಾಜ್ಯದ 16 'ಶಾಶ್ವತ ಬರ ಪೀಡಿತ ಜಿಲ್ಲೆ'ಗಳಲ್ಲಿ ಒಂದೆಂದು ಘೋಷಣೆಯನ್ನೂ ಮಾಡಿದೆ!

ಹೆಚ್ಚಿದ ತಾಪಮಾನದಿಂದಾಗಿ ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ ಭಾಗಗಳಲ್ಲಿ ಐದು ವರ್ಷಗಳ ಹಿಂದೆ 14 ಲಕ್ಷಕ್ಕೂ ಹೆಚ್ಚು ತೆಂಗಿನ ಮರಗಳು ಸುಟ್ಟು ಹೋಗಿದ್ದವು. ಅವನ್ನು ನಂಬಿ ಬದುಕಿದ್ದ 85 ಸಾವಿರ ರೈತರ ಮನೆಯಲ್ಲಿ ಸೂತಕದ ಛಾಯೆ ಆವರಿಸಿತ್ತು. ಮಳೆಯಿಲ್ಲದೆ, ಬಿದ್ದ ಮಳೆನೀರನ್ನು ಸಮರ್ಪಕವಾಗಿ ಸಂಗ್ರಹಿಸಿಡದೆ, ಬೆಳೆ ಕೈಕೊಟ್ಟು, ಬರದ ಬೇಗೆ ತಾಳದೆ, ಕೃಷಿ ಸಾಲ ತೀರಿಸಲಾಗದೆ, ಜಿಲ್ಲೆಯ ನೂರಾರು ರೈತರು ಪ್ರತಿನಿತ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕಾಣುವಾಗ ತೀವ್ರ ಸಂಕಟವಾಗುತ್ತಿತ್ತು. ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ವಿಪರೀತ ಮಳೆ ಸುರಿದು ಪ್ರವಾಹ, ಗುಡ್ಡ–ಭೂಮಿ ಕುಸಿತದ ಸಂಕಟವನ್ನೂ ಕಳೆದ ಒಂದೆರಡು ವರ್ಷಗಳಲ್ಲಿ ಅನುಭವಿಸಿದೆವು. ಈ ವರ್ಷದ ಆರಂಭದಲ್ಲಿಯೂ ಮುನ್ನೂರಕ್ಕೂ ಹೆಚ್ಚು ಹಳ್ಳಿಗಳಿಗೆ ಟ್ಯಾಂಕರ್‌ಗಳಲ್ಲಿ ನೀರೊದಗಿಸುವ ಪಟ್ಟಿ ತಯಾರಿಸಲಾಗಿತ್ತು!

ಇದೆಲ್ಲದರ ಹಿನ್ನೆಲೆಯಲ್ಲಿ ಬರ ಮತ್ತು ಪ್ರವಾಹವನ್ನು ಏಕ ಕಾಲದಲ್ಲಿ ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುವಂತಹ ತಾತ್ಕಾಲಿಕ ಕ್ರಮಗಳಿಗಿಂತ, ಶಾಶ್ವತ ಪರಿಹಾರ ಕ್ರಮಗಳನ್ನು ನಾವು ತಕ್ಷಣಕ್ಕೆ ಯೋಚಿಸಲೇಬೇಕಿತ್ತು. ಪ್ರಕೃತಿಯನ್ನು ಸಮಸ್ಥಿತಿಗೆ ತರಲು ಯುದ್ಧೋಪಾದಿಯಲ್ಲಿ ಪರಿಸರ ಸಂಬಂಧಿತ ರಚನಾತ್ಮಕ ಕೆಲಸಗಳನ್ನು ನಮ್ಮ ಕೈಲಾಗುವಷ್ಟಾದರೂ ಮಾಡಲೇಬೇಕಿತ್ತು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನಿಂದ ಅನೇಕ ಯೋಜನೆಗಳ ಮೂಲಕವೂ ಕೆಲವು ಜಲಮೂಲಗಳ ಹೂಳೆತ್ತುವ ಕೆಲಸ ಇತ್ತೀಚಿಗಿನ ವರ್ಷಗಳಲ್ಲಿ ನಡೆದಿದ್ದರೂ ಅದಕ್ಕೆ ಸಮುದಾಯವೂ ಕೈಜೋಡಿಸಿ ವ್ಯಾಪಕಗೊಳಿಸುವ ಅವಶ್ಯಕತೆ ಇದ್ದೇ ಇತ್ತು. ಹೀಗಾಗಿಯೇ ಜಿಲ್ಲೆಯ ಪರಿಸರ ಕುರಿತ ಸಮಾನ ಆಸಕ್ತರನ್ನೊಳಗೊಂಡು, ಪರಿಸರ ಮತ್ತು ಜಲಾಂದೋಲನವನ್ನು ಕಟ್ಟುವ ಕನಸಿನೊಂದಿಗೆ, ಸಮುದಾಯ ಸಂಘಟನೆಯಾದ 'ಹಸಿರುಭೂಮಿ ಪ್ರತಿಷ್ಠಾನ' 2017ರ ಮೇ 1ರಂದು ಹುಟ್ಟಿಕೊಂಡಿತ್ತು.

ಕಳೆದ ಮೂರು ವರ್ಷಗಳಿಂದ ಪ್ರತಿಷ್ಠಾನದ ನೇತೃತ್ವ ಹಾಗೂ ಪ್ರೇರಣೆಯೊಂದಿಗೆ ಜನಸಮುದಾಯ, ದಾನಿಗಳು, ಸಂಘಟನೆಗಳ ಬೆಂಬಲದೊಂದಿಗೆ, ಆಗೀಗ ಸರ್ಕಾರದ ನೆರವಿನೊಂದಿಗೆ 12 ಕೆರೆಗಳನ್ನೂ, 46 ಕಲ್ಯಾಣಿಗಳನ್ನೂ ಹೂಳೆತ್ತಿ ಪುನಶ್ಚೇತನಗೊಳಿಸಲಾಗಿದೆ. ಸಕಲೇಶಪುರದ ಬ್ಯಾಕರವಳ್ಳಿ ಗ್ರಾಮಪಂಚಾಯತ್ ಅಧ್ಯಕ್ಷ ವಿಜಯಕುಮಾರ್ 'ಹಸಿರುಭೂಮಿ